ಸೌಕರ್ಯವು ಸರಿಯಾದ ಪ್ರಮಾಣದಲ್ಲಿ ಆಗದೆ ಅನಾನುಕೂಲವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಬಂದಿದೆ.

ಈ ಹಾಗಿದ್ದಲ್ಲಿ, ಕೂಡಲೇ ಜಲ ಸಂವರ್ಧನೆ ಯೋಜನೆಯಡಿಯಲ್ಲಿ ಈ ತಾಲ್ಲೂಕನ್ನು ಸೇರ್ಪಡಿಸಿ, ಈ ಭಾಗದ ರೈತರಿಗೆ ನೀರಾವರಿ ಸೌಕರ್ಯವನ್ನು ಕಲ್ಪಿಸಿಕೊಡುವ ಯೋಜನೆ ಸರ್ಕಾರದ ಮುಂದಿದೆಯೇ?

"ಆ"ದಲ್ಲಿ ನೀಡಿರುವ ಉತ್ತರದಂತೆ

ಕರ್ನಾಟಕ ವಿಧಾನಸಭೆ
13ನೇ ವಿಧಾನಸಭೆ
1ನೇ ಅಧಿವೇಶನ
****

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (116)186
: (ಶ್ರೀ ಜಿ.ಕರುಣಾಕರ ರೆಡ್ಡಿ)

ವಿಧಾನಸಭೆ ಸದಸ್ಯರ ಹೆಸರು : ಶ್ರೀ ಶಿವಶಂಕರ ರೆಡ್ಡಿ.ಎನ್.ಹೆಚ್ (ಗೌರಿಬಿದನೂರು)

ವಿಷಯ : ಜನನ ಮತ್ತು ಮರಣ ಪ್ರಮಾಣ ಪತ್ರಗಳನ್ನು ಗಣಕೀಕೃತಗೊಳಿಸುವುದು

ಅ ಸರ್ಕಾರವು ಈ ಹಿಂದೆ ಯೋಜಿಸಲಾಗಿದ್ದ ಜನನ, ಮರಣ ಹಾಗೂ ಜಾತಿ ಪ್ರಮಾಣ ಪತ್ರ ಮತ್ತು ಭೂಮಿ ಯೋಜನೆಯಲ್ಲಿ ಪಹಣಿಗಳ ಗಣಕೀಕರಣಗೊಳಿಸಲು ಸರ್ಕಾರ ಕೈಗೊಂಡ ಕ್ರಮವೇನು;

i. ಪಹಣಿಗಳ ಗಣಕೀಕರಣವನ್ನು ಭೂಮಿ ಯೋಜನೆಯಡಿ ಪೂರ್ಣಗೊಳಿಸಲಾಗಿದೆ.

ii. ಜನನ,ಮರಣ ಹಾಗೂ ಜಾತಿ ಪ್ರಮಾಣ ಪತ್ರಗಳ ಗಣಕೀಕರಣದ ಕಾರ್ಯ ನೆಮ್ಮದಿ ಯೋಜನೆಯಡಿ ಪ್ರಗತಿಯಲ್ಲಿದೆ.

ಆ ಪ್ರಸ್ತುತ ಸರ್ಕಾರವು ಜಾತಿ ಆದಾಯ ಪತ್ರವನ್ನು 5 ವರ್ಷಕೊಮ್ಮೆ ಪಡೆಯುವ ಅವಧಿಯನ್ನು ಸೀಮಿತಗೊಳಿಸಿ ನಿಗದಿಮಾಡಿದ್ದು, ಪದೇ ಪದೇ ಜಾತಿ ಪ್ರಮಾಣ ಪತ್ರ ಪಡೆಯುವ / ನೀಡುವ ಕೆಲಸವನ್ನು ನಿಲ್ಲಿಸಿ, ರೈತರಿಗೆ ವಿದ್ಯಾರ್ಥಿಗಳಿಗೆ, ನೌಕರರುಗಳಿಗೆ ಅನುಕೂಲಮಾಡಿಕೊಡಲು ಸರ್ಕಾರ ಕ್ರಮ ಕೈಗೊಳ್ಳುವುದೇ;

ಕರ್ನಾಟಕ ಪರಿಶಿಷ್ಟ ಜಾತಿಗಳು, ಪರಿಶಿಷ್ಟ ಪಂಗಡಗಳು ಮತ್ತು ಇತರೆ ಹಿಂದುಳಿದ ವರ್ಗಗಳು (ನೇಮಕಾತಿಯಲ್ಲಿ ಮೀಸಲಾತಿ ಇತರೆ) ನಿಯಮಗಳು, 1992ರ ನಿಯಮ 3–ಸಿಯ ಉಪ ನಿಯಮ(2) ಕ್ಕೆ ಅಧಿಸೂಚನೆ ಸಂಖ್ಯೆ:

ಎಸ್‌ಡಬ್ಲ್ಯೂಡಿ 3 ಎಸ್‌ಟಿಸಿ 02, ದಿನಾಂಕ: 11.03.2002 ರಲ್ಲಿ ತಿದ್ದುಪಡಿ ತಂದಂತೆ ಕರ್ನಾಟಕ ಪರಿಶಿಷ್ಟ ಜಾತಿಗಳು, ಪರಿಶಿಷ್ಟ ಪಂಗಡಗಳು ಮತ್ತು ಇತರೆ ಹಿಂದುಳಿದ ವರ್ಗಗಳ (ನೇಮಕಾತಿಯಲ್ಲಿ ಮೀಸಲಾತಿ ಇತರೆ) ಕಾಯ್ದೆ 1990ರ ಕಲಂ 4–ಎ ರಂತೆ ತಹಶೀಲ್ದಾರ್‌ರವರು ನೀಡುವ ಜಾತಿ/ಆದಾಯ ಪ್ರಮಾಣ ಪತ್ರ 5 ವರ್ಷಗಳವರೆಗೆ ಜಾರಿಯಲ್ಲಿರುತ್ತದೆ.

ಅನುಷ್ಠಾನದಲ್ಲಿ ಇರುವ ಸರ್ಕಾರಿ ಸುತ್ತೋಲೆಯಂತೆ ಪ್ರತಿ ವರ್ಷವು ಆದಾಯ ಮತ್ತು ಜಾತಿ ಪ್ರಮಾಣ ಪತ್ರಗಳನ್ನು ಕೆಳುವುದನ್ನು ತಪ್ಪಿಸಲು ಸಮಾಜ ಕಲ್ಯಾಣ ಇಲಾಖೆ ಮತ್ತು ಶಿಕ್ಷಣ ಇಲಾಖೆಗಳೊಡನೆ ಸಮಾಲೋಚಿಸಿ ಕ್ರಮ ಕೈಗೊಳ್ಳಲಾಗುವುದು.

ಇ ಎಲ್ಲಾ ವರ್ಗದ ಜಾತಿ ಪ್ರಮಾಣ ಪತ್ರಗಳಲ್ಲಿ ಅವರವರ ಭಾವ ಚಿತ್ರಗಳನ್ನು ಲಗ್ನತ್ತಿಸಿ ನೀಡಲು ಸರ್ಕಾರ ಕ್ರಮ ಕೈಗೊಳ್ಳುವುದೇ;

ಸಮಾಜ ಕಲ್ಯಾಣ ಇಲಾಖೆ ಹೊರಡಿಸಿರುವ ಸುತ್ತೋಲೆ ಸಂಖ್ಯೆ: ಎಸ್‌ಡಬ್ಲ್ಯೂಎಲ್ 213 ಎಸ್‌ಎಡಿ 85 ದಿನಾಂಕ: 12.08.1987ರ ಪ್ರಕಾರ ಪರಿಶಿಷ್ಟ ವರ್ಗಗಳ ಜನಗಳಿಗೆ ನೀಡುವ ಜಾತಿ ಆದಾಯ ಪ್ರಮಾಣ ಪತ್ರದಲ್ಲಿ ಭಾವ ಚಿತ್ರವನ್ನು ಅಳವಡಿಸಿ ನೀಡಬೇಕೆಂಬುದನ್ನು ಕಡ್ಡಾಯಗೊಳಿಸಲಾಗಿದೆ. ಇತರೆ ಹಿಂದುಳಿದ ವರ್ಗಗಳವರಿಗೆ ಭಾವಚಿತ್ರ ಅಳವಡಿಸಿ ಜಾತಿ ಆದಾಯ ಪತ್ರ ನೀಡುವ ವಿಷಯ ಪರಿಶೀಲನೆಯಲ್ಲಿರುತ್ತದೆ.

ಈ ಸಂದ್ಯಾ ಸುರಕ್ಷೆ ಯೋಜನೆಯಲ್ಲಿ ಪಿಂಚಣಿ ನೀಡಲು ಪಡಿತರ ಚೀಟಿ ನೀಡುವಲ್ಲಿ ಒತ್ತಾಯಿಸುತ್ತಿರುವುದು ನಿಜವೇ; ಪಡಿತರ ಚೀಟಿಗಳಲ್ಲಿ ಮಕ್ಕಳ ಹೆಸರು ನಮೂದಾಗಿದ್ದರೆ ಪಿಂಚಣಿ ನಿರಾಕರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ ಇದರಿಂದ ವೃದ್ದರಿಗೆ ತೊಂದರೆಯಾಗುತ್ತಿರುವುದು ನಿಜವಲ್ಲವೇ; ಇದರಿಂದ ಸಂದ್ಯಾ ಸುರಕ್ಷಿತ ಯೋಜನೆಯು ವಿಫಲವಾಗಿತ್ತಿಲ್ಲವೇ; ಮಕ್ಕಳಿಂದ ಪೋಷಣೆಯಾಗದೇ ಇರುವ ವೃದ್ದರಿಗೆ ಸರ್ಕಾರದಿಂದೊದಗಿಸಬಹುದಾದ ರೂಪುರೇಷೆ ಏನು; ಈ ಕಾನೂನುಗಳ ಸಡಲಿಕೆ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

I. ಸಂದ್ಯಾ ಸುರಕ್ಷಾ ಯೋಜನೆಯನ್ನು ಆರ್ಥಿಕ ಸಂಕಷ್ಟದಲ್ಲಿರುವ 65 ವರ್ಷಕ್ಕಿಂತ ಹೆಚ್ಚು ವಯಸ್ಸಾದ ಹಿರಿಯ ಜೀವಗಳಿಗೆ ಆರ್ಥಿಕ ಸಹಾಯವಾಗಿ ರೂ 400ಗಳ ಮಾಸಾಶನವನ್ನು ನೀಡುವುದಾಗಿರುತ್ತದೆ.

II. ಯೋಜನೆಯ ನಿಯಮಾವಳಿಗಳಂತೆ ಪಿಂಚಣಿಯನ್ನು ಅರ್ಹ ವ್ಯಕ್ತಿಗೆ ಮಂಜೂರು ಮಾಡಲು ಪಡಿತರ ಚೀಟಿಯ ಅಗತ್ಯವಿರುವುದಿಲ್ಲ. ಆದುದರಿಂದ ಸಂದ್ಯಾ ಸುರಕ್ಷಾ ಯೋಜನೆಯನ್ನು ಮಂಜೂರು ಮಾಡಲು ಸಂಬಂಧಪಟ್ಟ ಅಧಿಕಾರಿಗಳು ಪಡಿತರ ಚೀಟಿಯಲ್ಲಿ ಮಕ್ಕಳ ಹೆಸರು ನಮೂದಾಗಿದ್ದಲ್ಲಿ ಪಿಂಚಣಿ ನಿರಾಕರಿಸಲು ಬರುವುದಿಲ್ಲ.

III. ಜನಸ್ಪಂದನ ಕಾರ್ಯಕ್ರಮಗಳನ್ನು ಏರ್ಪಡಿಸುವುದರ ಮೂಲಕ ಜನರಿಗೆ ಸಂದ್ಯಾ ಸುರಕ್ಷಾ ಅರಿವು ಮೂಡಿಸಿ ಅರ್ಹ ಫಲಾನುಭವಿಗಳನ್ನು ಗುರುತಿಸಿ ಕೂಡಲೆ ಮಂಜೂರಾತಿಗೆ ಕ್ರಮ ಜರೂಗಿಸಬೇಕೆಂದು ಎಲ್ಲಾ ಜಿಲ್ಲಾಧಿಕಾರಿಗಳಿಗೆ ಸುತ್ತೋಲೆ ಮೂಲಕ ತಿಳಿಸಲಾಗಿರುತ್ತದೆ. ಈಗಾಗಲೇ 119063 ಫಲಾನುಭಾವಿಗಳಿಗೆ ಮಂಜೂರಾತಿ ನೀಡಲಾಗಿದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (363)187
ಸದಸ್ಯರ ಹೆಸರು : ಶ್ರೀ ಸೋಮಣ್ಣ ವಿ.
ಉತ್ತರಿಸುವವರು : (ಶ್ರೀ.ಜಿ.ಕರುಣಾಕರರೆಡ್ಡಿ)
ಮಾನ್ಯ ಕಂದಾಯ ಸಚಿವರು

ಅ) ಬೆಂಗಳೂರು ನಗರ ಹಾಗೂ ಗ್ರಾಮಾಂತರ ಜಿಲ್ಲೆಗಳಲ್ಲಿ ಒತ್ತುವರಿಯಾಗಿರತಕ್ಕ ಸರ್ಕಾರಿ ಜಮೀನುಗಳ ಅಂದಾಜು ವಿಸ್ತೀರ್ಣವೆಷ್ಟು;

ಬೆಂಗಳೂರು ನಗರ ಜಿಲ್ಲೆಯಲ್ಲಿ 33,877 ಎಕರೆ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ 2,212 ಎಕರೆ 34 ಗುಂಟೆ ಸರ್ಕಾರಿ ಜಮೀನು ಒತ್ತುವರಿಯಾಗಿದೆ ಎಂದು ಗುರುತಿಸಲಾಗಿದೆ.

ಆ) ಶ್ರೀ ಎ.ಟಿ. ರಾಮಸ್ವಾಮಿ ನೇತೃತ್ವದ ಕರ್ನಾಟಕ ವಿಧಾನ ಮಂಡಲದ ಜಂಟಿ ಸದನ ಸಮಿತಿ ನೀಡಿರುವ ವರದಿ ಮೇಲೆ ಸರ್ಕಾರ ಕೈಗೊಂಡ ಕ್ರಮಗಳೇನು;

ಇ) ಈ ಮೇಲ್ಕಂಡ ಜಿಲ್ಲೆಗಳಲ್ಲಿ ಒತ್ತುವರಿಯಾಗಿರತಕ್ಕ ಸರ್ಕಾರಿ ಜಮೀನುಗಳನ್ನು ಸ್ವಾಧೀನಪಡಿಸಿಕೊಳ್ಳಲು ಸರ್ಕಾರ ಕೈಗೊಂಡ ಕ್ರಮಗಳೇನು?

ಸರ್ಕಾರಿ ಜಮೀನಿನಲ್ಲಿನ ಒತ್ತುವರಿಯನ್ನು ತೆರವುಗೊಳಿಸಲು ಎಲ್ಲಾ ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡಲಾಗಿರುತ್ತದೆ. ಬೆಂಗಳೂರು ನಗರ ಜಿಲ್ಲೆಯಲ್ಲಿ ಇಲ್ಲಿಯವರೆಗೂ 8,717 ಎಕರೆ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ 1,495 ಎಕರೆ 2 ಗುಂಟೆ ಸರ್ಕಾರಿ ಜಮೀನನ್ನು ಒತ್ತುವರಿಯಿಂದ ತೆರವುಗೊಳಿಸಿ ಸರ್ಕಾರಕ್ಕೆ ಸ್ವಾಧೀನ ಪಡೆಸಿಕೊಳ್ಳಲಾಗಿದೆ ಮತ್ತು 615 ಕ್ರಿಮಿನಲ್ ದೂರುಗಳನ್ನು ದಾಖಲಿಸಲಾಗಿದೆ.

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (364)188
2) ಸದಸ್ಯರ ಹೆಸರು : ಶ್ರೀ ವಿ.ಸೋಮಣ್ಣ
3) ಉತ್ತರಿಸುವ ಸಚಿವರು : (ಶ್ರೀ.ಬಸವರಾಜ್ ಬೊಮ್ಮಾಯಿ)
ಜಲ ಸಂಪನ್ಮೂಲ ಸಚಿವರು

ಅ ತಮಿಳುನಾಡು ಸರ್ಕಾರ ಹೊಗೆನಕಲ್ ಯೋಜನೆಯ ಕಾಮಗಾರಿಯನ್ನು ಪ್ರಾರಂಭಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ತಮಿಳುನಾಡು ಸರ್ಕಾರವು ಹೊಗೇನಕಲ್ ಬಳಿ ಪ್ರಾರಂಭಿಸಿರುವ ಕುಡಿಯುವ ನೀರಿನ ಯೋಜನೆಯ ವಿಷಯವು ರಾಜ್ಯ ಸರ್ಕಾರದ ಗಮನಕ್ಕೆ ಬಂದಿರುತ್ತದೆ.